# ಎನ್‌ಐಟಿಕೆಯಲ್ಲಿ ಸ್ಮಾರ್ಟ್ ಇಂಡಿಯಾ ಹ್ಯಾಕಥಾನ್ ಮುಕ್ತಾಯ: ಪ್ರಶಸ್ತಿ ವಿತರಣೆ



**ಸುರತ್ಕಲ್, ಡಿ. 13:** ಇಲ್ಲಿನ ಎನ್ ಐಟಿಕೆ ಕ್ಯಾಂಪಸ್‌ನಲ್ಲಿ ನಡೆದ 2 ದಿನಗಳ ಸ್ಮಾರ್ಟ್ ಇಂಡಿಯಾ ಹ್ಯಾಕಥಾನ್ 2024 ಫೈನಲ್ ಮುಕ್ತಾಯಗೊಂಡು ವಿಜೇತರನ್ನು ಘೋಷಿಸಿ ಬಹುಮಾನ ವಿತರಿಸಲಾಯಿತು.

ಕಲ್ಲಿದ್ದಲು ಸಚಿವಾಲಯದ ಸಮಸ್ಯೆ ಬಗೆ ಹರಿಸುವಲ್ಲಿ ಹುಬ್ಬಳ್ಳಿಯ ಜೈನ್ ಕಾಲೇಜ್ ಎಂಜಿನಿಯರಿಂಗ್ ಆಂಡ್ ಟೆಕ್ನಾಲಜಿ, ರಾಡೌರ್‌ನ ಸೇಠ್ ಜೈ ಪ್ರಕಾಶ್, ಮುಕುಂದ್ ಲಾಲ್ ಎಂಜಿನಿಯರಿಂಗ್ ಸಂಸ್ಥೆ ಜಂಟಿಯಾಗಿ ವಿಜೇತ ಎಂದು ಘೋಷಿಸಲಾಯಿತು.

ಕಲ್ಲಿದ್ದಲು ಗಣಿಗಳ ಉತ್ಪಾದಕತೆ, ಸುರಕ್ಷತ ನಿರ್ವಹಣೆಯ ಆಧಾರಿತ ಆಪ್ಲಿಕೇಶನ್, ಸಾಫ್ಟ್‌ವೇರ್ ನಿರ್ವಹಿಸಿದ ಮುಂಬಯಿನ ಸರ್ದಾರ್ ಪಟೇಲ್, ಸಿವಿ ರಾಮನ್ ಗ್ಲೋಬಲ್ ಯೂನಿವರ್ಸಿಟಿ ಜಂಟಿಯಾಗಿ, ಕಲ್ಲಿದ್ದಲು ವಲಯದ ಆರ್ ಆ್ಯಂಡ್ ಡಿ ವಿಭಾಗದ ಸಮಸ್ಯೆ ಬಗೆ ಹರಿಸುವಲ್ಲಿ ಭೋಪಾಲ್‌ನ ವಿಐಟಿ, ಪುಣೆಯ ಜೆಎಸ್‌ಪಿಎಂನ ರಾಜರ್ಷಿ ಶಾಹು ಎಂಜಿನಿಯರಿಂಗ್ ಕಾಲೇಜು ಜಂಟಿ ವಿಜೇತರೆಂದು ಘೋಷಿಸಿ ಬಹುಮಾನ ವಿತರಿಸಲಾಯಿತು.

ಯುವ ವ್ಯವಹಾರ, ಕ್ರೀಡಾಸಚಿವಾಲಯದ ಶಿಕ್ಷಣ ಮತ್ತು ಡೋಪಿಂಗ್ ವಿರೋಧಿ ಮಾಹಿತಿಗಾಗಿ ತಂತ್ರಜ್ಞಾನದ ಪರಿಣಾಮಕಾರಿ ಬಳಕೆ ಯಲ್ಲಿ ಚೆನ್ನೈನ ಸಾಯಿರಾಮ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಚೆನ್ನೈ, ಗುಪ್ತಚರ ಮತ್ತು ತನಿಖೆಗಳು ವಿಭಾಗದಲ್ಲಿ ಥಾಣೆಯ ಎಪಿ ಶಾ ಟೆಕ್ನಾಲಜಿ, ಡೋಪಿಂಗ್ ವಿರೋಧಿ ಮಾಹಿತಿಯ ಗೇಮಿಫಿಕೇಷನ್‌ನಲ್ಲಿ ಜಿಡಿ ಗೋಯಂಕಾ ವಿ.ವಿ. ಹರಿಯಾಣ, ತಮಿಳುನಾಡಿನ ಪೆರಂಬದೂರು ರಾಜೀವ್ ಇನ್‌ಸ್ಟಿಟ್ಯೂಟ್ ಆಫ್ ಯೂತ್ ಡೆವಲಪ್‌ಮೆಂಟ್ ಜಂಟಿ ವಿಜೇತರಾಗಿ ಘೋಷಿಸಲಾಯಿತು.

ತಲಾ ಒಂದು ಲಕ್ಷ ರೂ. ಬಹುಮಾನ ಮೊತ್ತ, ಪ್ರಮಾಣ ಪತ್ರ ವಿತರಣೆ ನಡೆಯಿತು.

Udayavani, Date:14/12/24, p, no - 04